**ಉಪನಿರ್ದೇಶಕರು (ಆಡಳಿತ) ರವರ ಕಚೇರಿ**

**ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು**

---

**2022–23 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು**

**ವಿಷಯ: 01 K–ಪ್ರಥಮ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು: 100** **ಸಮಯ : 03.15ಗಂಟೆಗಳು**

************************************************************************************

**ಅಭ್ಯಾಸ ಪತ್ರಿಕೆ–4**

************************************************************************************

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.** **6x1=6**

1. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಭಿಪ್ರಾಯದ ವಾಕ್ಯವಿದು
   ಎ) ಸಾಮಾನ್ಯ ವಾಕ್ಯ ಬಿ) ಮಿಶ್ರವಾಕ್ಯ
   ಸಿ) ಸರಳವಾಕ್ಯ ಡಿ) ಸಂಯೋಜಿತವಾಕ್ಯ
2. ಜಾತ್ಯತೀತ ಪದವು ಈ ಸಂಧಿಗೆ ಉದಾಹರಣೆಯಾಗಿದೆ.
   ಎ) ಗುಣ ಸಂಧಿ ಬಿ) ವೃದ್ಧಿ ಸಂಧಿ
   ಸಿ) ಯಣ್ ಸಂಧಿ ಡಿ) ಜಶ್ತ್ವ ಸಂಧಿ

3.ಚತುರ್ಥೀ ವಿಭಕ್ತಿ ಪ್ರತ್ಯಯದ ಕಾರಕರ್ಥ
   ಎ) ಸಂಪ್ರದಾನ ಬಿ) ಕರಣಾರ್ಥ
   ಸಿ) ಕರ್ಮಾರ್ಥ ಡಿ) ಕರ್ತ್ರಾರ್ಥ

4. ತಿನ್ನುವರು ಎಂಬ ಪದದ ಸಂಭಾವನಾರ್ಥಕ ರೂಪ
   ಎ) ತಿನ್ನಲಿ ಬಿ) ತಿನ್ನರು
   ಸಿ) ತಿನ್ನಿಯಾರು ಡಿ) ತಿಂದರು
5. ಕರಿತುರಗರಥ ಎಂಬ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.
   ಎ) ತತ್ಪುರುಷ ಸಮಾಸ ಬಿ) ದ್ವಿಗು ಸಮಾಸ
   ಸಿ) ಅಂಶಿ ಸಮಾಸ ಡಿ) ದ್ವಂದ್ವ ಸಮಾಸ
6. ಒಂದು ಪೂರ್ಣಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಬಳಸುವ ಚಿಹ್ನೆ.
   ಎ) ಪೂರ್ಣ ವಿರಾಮ ಬಿ) ಅರ್ಧ ವಿರಾಮ
   ಸಿ) ಅಲ್ಪ ವಿರಾಮ ಡಿ) ಭಾವಸೂಚಕ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧಿಸಿದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂದೀ ಪದವನ್ನು ಬರೆಯಿರಿ.** **4x1=4**

7. ಬಂಜೆ : ವಂಧ್ಯಾ :: ಸಂದೆಯ : ------------------
8. ಅಸು : ಪ್ರಾಣ :: ವಾಸಿ : ----------------------
9. ಮಾಟ : ಕೃದಂತಭಾವನಾಮ :: ಮಾಡಿದ : ----------
10. ಸತಿಪತಿ : ಜೋಡುನುಡಿ :: ತುತ್ತತುದಿ :--------------

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7x1=7**

11. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ?
12. ದಿನಪಸುತ ಎಂದರೆ ಯಾರು?

13. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?
14. 'ಶಿವಾನುಭವ ಶಬ್ದಕೋಶ' ಪುಸ್ತಕ ಬರೆದವರು ಯಾರು?
15. ಅನ್ನದ ವಿಷಯದಲ್ಲಿ ವೇದ ಏನು ಹೇಳಿದೆ?
16. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?
17. 'ಸೌಮಿತ್ರಿ' ಎಂದು ಯಾರನ್ನು ಕರೆಯುವರು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10x2=20**

18. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
19. ದುಡ್ಡಿನ ನಿಜರೂಪವೇನು?
20. ಸಿರಿಯು ರಾಜರಿಗೆ ಒಲಿದರೆ ಏನೇನು ಅನಾಹುತಗಳಾಗುತ್ತವೆ?
21. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.
22. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?
23. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?
24. 'ಅನ್ ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?
25. ಜಲಿಯನ್ ವಾಲಾಭಾಗ್ ನಲ್ಲಿರುವ ಒಕ್ಕಣೆ ಏನು?
26. ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು?
27. ಕ್ರಾಂತಿಕಾರಿಗಳ ಪ್ರಾಣಾರ್ಪಣೆ ಮುಂದಿನ ದಿನಗಳಲ್ಲಿ ಭಾರತೀಯರಿಗೆ ಯಾವ ಬಗೆಯಲ್ಲಿ ಪ್ರೇರಣೆ ಕೊಟ್ಟಿತು?

**V. ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**

28. ದುರ್ಗಸಿಂಹ **2x3=6**
29. ರನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ,ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **3x1=3**

30. ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ

**VII.. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ.** **3x1=3**

31. **ಮಾರಿಗೆ ಔತಣವಾಯ್ತು, ನಾಳಿನ ಭಾರತವು.**

**VIII.. ಕೆಳಗಿನ ಗಾದೆಗಳಲ್ಲಿ ಯಾವುದಾದರೊಂದು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **3x1=3**

32. ಮಾಡಿದುಣ್ಣೊ ಮಾರಾಯ

**<u>ಅಥವಾ</u>**

ಮಾತೇ ಮುತ್ತು, ಮಾತೇ ಮೃತ್ಯು

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **3x6=18**

33. 'ನೊಳವಿಂಗೆ ಕುಪ್ಪೆ ವರಂ'
34. 'ಸಾಮಾಜಿಕ ಕಾನೂನುಗಳ ಹರಿಕಾರ'
35. 'ಭಗವಂತನ ಗುಣ ಎಂದಾದರೂ ಮನುಷ್ಯನಲ್ಲಿ ಬಂದೀತೆ?'
36. 'ಸಮಾಜ ಎಂಬ ಅಗ್ನಿಯಲ್ಲಿ ಮಾಡಿದ ಜಗದಾರಧನೆ'
37. 'ಬೇರೆ ಬಣ್ಣವನೆ ಕಾಣೆ'
38. 'ಸಮರದೊಳೆನಗಜ್ಜ ಪೇಳಿಮಾವುದು ಕಜ್ಜಂ'

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **4x1=4**

39. ಕೊರಳಸೆರೆ ಹಿಗ್ಗಿದವು ದೃಗುಜಲ____

______________________

______________________

______________________

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ

**ಅಥವಾ**

ಮಾರಿಗೌತಣವಾಯ್ತು ನಾಳಿನ

______________________

______________________

______________________

______________________

ವೀರರೈವರ ನೋಯಿಸೆನು ರಾಜೀವಸಖನಾಣೆ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** **4x1=4**

40. ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ
ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ
ಹಕ್ಕಿ ಹಾರುತ್ತಿದೆ ನೋಡಿದಿರಾ?

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **4x2=8**

41. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

42. ಹಸುರು ಕವನದಲ್ಲಿ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.

**ಅಥವಾ**

ಹಸುರು ಕವನದಲ್ಲಿ ಮೂಡಿಬಂದಿರುವ ಪ್ರಕೃತಿ ವೈಭವವನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **4x1=4**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶತಕ ಸಾಹಿತ್ಯ ವಿಶೇಷತೆಯಿಂದ ಕೂಡಿದ್ದು. ಈ ಪ್ರಕಾರದಲ್ಲಿ ಕೃತಿ ರಚನೆ ಮಾಡಿರುವ ಕವಿ ಸೋಮೇಶ್ವರ. ಇತನ ಕೃತಿ ಸೋಮೇಶ್ವರ ಶತಕವೆಂದೇ ಪ್ರಸಿದ್ಧಿಪಡೆದಿದೆ. ಸೋಮೇಶ್ವರ ಶತಕವು ಕನ್ನಡ ನಾಡಿನ ಜನಪದ ಕಾವ್ಯವೆಂಬಂತೆ ಜನರ ಮನಸ್ಸಿನಲ್ಲಿ ನೆಲೆಯಾಗಿರುವ ಕಾವ್ಯವಾಗಿದೆ.ನೀತಿ ಬೋಧಕವಾದ ಈ ಕಾವ್ಯವು ಇಂದಿಗೂ ಅನುಕರಣೀಯವಾದುದ್ದಾಗಿದೆ.

"ಮಾತೃ ದೇವೋಭವ ಪಿತೃ ದೇವೋಭವ ಆಚಾರ್ಯದೇವೋಭವ" ಎಂಬುದು ನಮ್ಮೆಲ್ಲ ಧರ್ಮಗಳ ಮೂಲ ಮಂತ್ರ, ರಾಜನಾಗಲಿ, ಮಂತ್ರಿಯಾಗಲಿ,ರಕ್ಷಕರಾದ ಭಟರಾಗಲಿ ಇದರಿಂದ ಹೊರತಾಗುವುದಿಲ್ಲ.ದೈವದ ಅನುಗ್ರಹವು ಸ್ವಾಭಾವಿಕವಾಗಿ ಇಂತಹ ನೆಲೆಯಲ್ಲಿ ನಿಂತಿರುತ್ತದೆ.

1. ಕನ್ನಡ ನಾಡಿನ ಜನಪದ ಕಾವ್ಯವೆಂಬಂತೆ ಜನಮನದಲ್ಲಿ ನೆಲೆಸಿರುವ ಕಾವ್ಯ ಯಾವುದು? ಈ ಕಾವ್ಯದ ನಿರ್ಮಾತೃ ಯಾರು?
2. ಯಾರು ಯಾರು ತಮ್ಮ ಕರ್ತವ್ಯದಿಂದ ಹೊರತಾಗಿಲ್ಲ?

**XIV**. ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ ‘ರಮೇಶ’ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚಾರಿಸಿದ ‘ಗಣರಾಜ್ಯೋತ್ಯವ’ದ ಕಾರ್ಯಕ್ರಮದ ಕುರಿತು ವರದಿ ಪ್ರಕಟಿಸುವಂತೆ ದಿನಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಧಾರಾವಾಡದ ಸರ್ವೋದಯ ಶಾಲೆಯ ‘ವಿನೂತ ‘ಎಂದು ಭಾವಿಸಿಕೊಂಡು ಪರೀಕ್ಷಾ ತಯಾರಿ ಕುರಿತು ಹಾವೇರಿಯಲ್ಲಿ ವಾಸವಾಗಿರುವ ನಿಮ್ಮ ತಂದೆಗೆ ಪತ್ರ ಬರೆಯಿರಿ. **5x1=5**

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 5x1=5**

45. ಸಾಮಾಜಿಕ ಪಿಡುಗುಗಳು.

**ಅಥವಾ**

ಶಿಕ್ಷಣದಲ್ಲಿ ಅಂತರ್ಜಾಲದ ಮಹತ್ವ

※※※※※